**ಸಾಕ್ಷಿ ಯನ್ನು ದಿನಾಂಕ:23.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಜಿ ಎನ್ ವಕೀಲರಿಂದ:**

ಪ್ರತಿವಾದಿ ಇತ್ತೀಚೆಗೆ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಮೀನಾಕುಮಾರಿಯವರ ಆಸ್ತಿಯ ಚೆಕ್ಕುಬಂದಿ ಹೇಳಲು ನನಗೆ ಬರುವುದಿಲ್ಲ. ಮೀನಾಕುಮಾರಿ ಮತ್ತು ಗೀತಾ ಹಾಗೂ ಲೋಕೇಶ್ ರವರು ದಾವೇ ಹೂಡಿರುವ ಬಗ್ಗೆ ನನಗೆ ಗೊತ್ತು. ಸದರಿ ದಾವೇಯನ್ನು ಅವರು ನಿವೇಶನವನ್ನು ಸ್ವಚ್ಛಗೊಳಿಸಲು ಹೋದಾಗ, ಪ್ರತಿವಾದಿಗಳು ತೊಂದರೆ ನೀಡಿದ ಕಾರಣ, ಹೂಡಿರುತ್ತಾರೆ.

2. ನಾವು ಖರೀದಿಸಿರುವ ನಿವೇಶನದ ಸರ್ವೆ ನಂಬರ್ ನಲ್ಲಿ ಎಷ್ಟು ನಿವೇಶನಗಳಿವೆ ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳುವ ನಿವೇಶನ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಮೀನಾಕುಮಾರಿ ಮತ್ತು ಗೀತಾ ಹಾಗೂ ಲೋಕೇಶ್ ರವರು ಸಲ್ಲಿಸಿರುವ ದಾವಾ ಆಸ್ತಿಗಳು ಯಾವ ಸರ್ವೆ ನಂಬರ್ ನಲ್ಲಿ ಬರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ಹೇಳಿದ ಮುನ್ಸಿಪಲ್ ರಸ್ತೆ ಎಲ್ಲಿಂದ ಎಲ್ಲಿ ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ರಸ್ತೆ ಮಣ್ಣಿನ ರಸ್ತೆಯಾಗಿರುತ್ತದೆ. ಸದರಿ ರಸ್ತೆ ಎಷ್ಟು ಅಳತೆ ಇದೆ ಎಂದು ನನಗೆ ಗೊತ್ತಿಲ್ಲ.

3. ಈ ದಾವೇಯಲ್ಲಿ ಪ್ರತಿವಾದಿಗಳು ನಿವೇಶನ ಸ್ವಚ್ಛ ಮಾಡಲು ಅಡ್ಡಿಪಡಿಸಿದ ಕಾರಣ, ದಾವೇ ಹೂಡಲಾಗಿದೆ ಎಂದು ವಾದ ಪತ್ರದಲ್ಲಿ ಬರೆಸಲಾಗಿದೆ. ಪ್ರತಿವಾದಿಗಳು ಯಾವ ದಿನಾಂಕದಂದು ತೊಂದರೆ ನೀಡಿದ್ದರು ಎಂದು ಬರೆಸಿದ್ದೇನೆ ಎಂದು ನನಗೆ ನೆನಪಿಲ್ಲ. ದಾವಾ ವಿಚಾರಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ನನಗೆ

ಯಾವ ರೀತಿ ತೊಂದರೆ ನೀಡಿರುತ್ತಾರೆ ಎಂದು ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ನಿವೇಶನ ಸ್ವಚ್ಛ ಮಾಡಲು ಹೋದಾಗ ಅಡ್ಡಿಪಡಿಸಿರುತ್ತಾರೆ ಎಂದು ಬರೆಸಿರುತ್ತೇನೆ.

4. 1ನೇ ಪ್ರತಿವಾದಿಯ ಮರಣದ ದಿನಾಂಕ ನನಗೆ ಗೊತ್ತಿಲ್ಲ. 2 ಮತ್ತು 3ನೇ ಪ್ರತಿವಾದಿಗಳು ನನ್ನ ವಿರುದ್ದ ಮುನ್ಸಿಪಲ್ ಅಪೀಲು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾನು ಮತ್ತು ಮೀನಾಕುಮಾರಿ ಮತ್ತು ಗೀತಾ ಹಾಗೂ ಲೋಕೇಶ್ ರವರು ಶರೀಕಾಗಿ ಪ್ರತಿವಾದಿಗಳ ಜಮೀನಿಗೆ ತೊಂದರೆ ನೀಡಲು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಕಬಳಿಸಲು ಸುಳ್ಳು ದಾವೇ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೇ ಹೂಡಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೇ ವಜಾ ಆದರೆ ನನಗೆ ನಷ್ಟವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.